Akashvani: Bangalore
National Bulletin In Kannada
18.09.2026: 13.10hrs
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
18.09.2026: 13.10hrs
**********

**ಮುಖ್ಯಾಂಶಗಳು :**

1. ಬೆಂಗಳೂರಿನಲ್ಲಿ ಎಚ್.ಎ.ಎಲ್ ಸಂಸ್ಥೆಯ ತರಬೇತಿ ವಿಮಾನಗಳ ಹಸ್ತಾಂತರ ಕಾರ್ಯಕ್ರಮ - ರಕ್ಷಣಾ ಸಚಿವ ರಾಜನಾಥ್ ಸಿಂಗ್ ಭಾಗಿ
2. ನವದೆಹಲಿಯಲ್ಲಿಂದು ವಿದೇಶಿ ದೇಣಿಗೆ ನಿಯಂತ್ರಣ ತಿದ್ದುಪಡಿ ಮಸೂದೆ ೨೦೨೬ರ ಕುರಿತ ಜಂಟಿ ಸಂಸದೀಯ ಸಮಿತಿಯ ಮೊದಲ ಸಭೆ
3. ಭಾರತ-ನೇಪಾಳ ಅಂತರ್ ಸರ್ಕಾರಿ ಉಪಸಮಿತಿ ಸಭೆ ಸಂಪನ್ನ; ಉತ್ಪನ್ನಗಳಿಗೆ ಹೆಚ್ಚಿನ ಮಾರುಕಟ್ಟೆ ಪ್ರವೇಶ ಕಲ್ಪಿಸುವ ಕುರಿತು ಚರ್ಚೆ
4. ಐಚಿ ನಗೋಯಾ ಏಷ್ಯನ್ ಗೇಮ್ಸ್ ಮಹಿಳಾ ಕ್ರಿಕೆಟ್; ಕ್ವಾರ್ಟರ್ ಫೈನಲ್‌ನಲ್ಲಿ ಜಪಾನ್ ವಿರುದ್ಧ ಭಾರತಕ್ಕೆ ಜಯ

*********

ಎಚ್‌ಎಎಲ್ ಸಂಸ್ಥೆ ತಯಾರಿಸಿದ ವಿವಿಧ ತರಬೇತಿ ವಿಮಾನ ಹಾಗೂ ಹೆಲಿಕಾಪ್ಟರ್‌ಗಳನ್ನು ಭಾರತೀಯ ವಾಯುಪಡೆ ಮತ್ತು ಪವನ್ ಹನ್ಸ್ ಸಂಸ್ಥೆಗೆ ಹಸ್ತಾಂತರಿಸುವ ಕಾರ್ಯಕ್ರಮಕ್ಕೆ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಬೆಂಗಳೂರಿನಲ್ಲಿಂದು ಚಾಲನೆ ನೀಡಲಿದ್ದಾರೆ. ಕಾರ್ಯಕ್ರಮದಲ್ಲಿ ಎರಡು ತೇಜಸ್ ತರಬೇತಿ ವಿಮಾನಗಳು ಹಾಗೂ ಮೊದಲ ಎಫ್‌ಟಿಟಿ ೪೦ ತರಬೇತಿ ವಿಮಾನವನ್ನು ವಾಯುಪಡೆಗೆ ಹಸ್ತಾಂತರಿಸಲಾಗುವುದು. ೨೦೩೩-೩೪ರ ವೇಳೆಗೆ ಎಚ್.ಎ.ಎಲ್ ವಾಯುಪಡೆಗೆ ೨೯ ಎಂ.ಕೆ-೧ಎ ಎರಡು ಆಸನದ ವಿಮಾನಗಳನ್ನು ತಲುಪಿಸುವ ಗುರಿ ಹೊಂದಿದೆ. ಇದರ ಜೊತೆಗೆ ದ್ರುವ್ ಎನ್ ಜಿ ಹೆಲಿಕಾಪ್ಟರ್‌ಗಳನ್ನು ಪವನ್ ಹನ್ಸ್ ಸಂಸ್ಥೆಗೆ ಹಸ್ತಾಂತರಿಸಲಾಗುವುದು. ನಾಗರಿಕ ವಿಮಾನಯಾನ ವಲಯಕ್ಕೆ ಸೇರ್ಪಡೆಯಾಗುತ್ತಿರುವ ದ್ರುವ್ ಎನ್ ಜಿ, ಎ.ಎಸ್-೪ ನಿಯಮಾವಳಿಗಳಿಗೆ ಅನುಗುಣವಾಗಿ ಭಾರತದಲ್ಲೇ ಸಂಪೂರ್ಣ ದೇಶೀಯವಾಗಿ ನಿರ್ಮಾಣಗೊಂಡ ಮೊದಲ ನಾಗರಿಕ ಹೆಲಿಕಾಪ್ಟರ್ ಆಗಿದೆ. ರಕ್ಷಣಾ ಸಚಿವಾಲಯ ೭೦, ಎಫ್‌ಟಿಟಿ ೪೦ ವಿಮಾನಗಳ ಪೂರೈಕೆಗೆ ಒಪ್ಪಂದ ಮಾಡಿಕೊಂಡಿದ್ದು, ಇವುಗಳ ಸೇರ್ಪಡೆ ವಾಯುಪಡೆಯ ಪೈಲಟ್ ತರಬೇತಿ ಕ್ಷೇತ್ರದಲ್ಲಿ ದೇಶದ ಸಾಮರ್ಥ್ಯವನ್ನು ಮತ್ತಷ್ಟು ಬಲಪಡಿಸಲಿದೆ.

*********

ವಿದೇಶಿ ದೇಣಿಗೆ ನಿಯಂತ್ರಣ ತಿದ್ದುಪಡಿ ಮಸೂದೆ ೨೦೨೬ರ ಕುರಿತ ಜಂಟಿ ಸಂಸದೀಯ ಸಮಿತಿಯ ಮೊದಲ ಸಭೆ ಇಂದು ನವದೆಹಲಿಯಲ್ಲಿ ನಡೆಯಲಿದೆ. ಸಭೆಯಲ್ಲಿ ಕೇಂದ್ರ ಗೃಹ ಸಚಿವಾಲಯದ ಪ್ರತಿನಿಧಿಗಳು ಮಸೂದೆಯ ವಿವಿಧ ಅಂಶಗಳ ಕುರಿತು ಸಮಿತಿಗೆ ಮಾಹಿತಿ ನೀಡಲಿದ್ದಾರೆ. ವಿದೇಶಿ ದೇಣಿಗೆ ಬಳಕೆಯಲ್ಲಿ ಹೆಚ್ಚಿನ ಪಾರದರ್ಶಕತೆ ಮತ್ತು ಹೊಣೆಗಾರಿಕೆ ತರಲು ೨೦೧೦ರ ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಗೆ ತಿದ್ದುಪಡಿ ತರಲು ಮಸೂದೆ ಉದ್ದೇಶಿಸಿದೆ. ಆಗಸ್ಟ್ ೧೨ರಂದು ಸಂಸತ್ತಿನ ಉಭಯ ಸದನಗಳು ಹೆಚ್ಚಿನ ಪರಿಶೀಲನೆಗಾಗಿ ಮಸೂದೆಯನ್ನು ಜಂಟಿ ಸಂಸದೀಯ ಸಮಿತಿಗೆ ಒಪ್ಪಿಸಲು ಅನುಮೋದನೆ ನೀಡಿದ್ದವು. ಲೋಕಸಭೆಯ ೨೧ ಹಾಗೂ ರಾಜ್ಯಸಭೆಯ ೧೦ ಸದಸ್ಯರನ್ನು ಒಳಗೊಂಡಿರುವ ಸಮಿತಿಗೆ ಲೋಕಸಭಾ ಸದಸ್ಯ ಸಂಜಯ್ ಜೈಸ್ವಾಲ್ ಅಧ್ಯಕ್ಷತೆ ವಹಿಸಲಿದ್ದಾರೆ. ಸಮಿತಿಯು ಚಳಿಗಾಲದ ಅಧಿವೇಶನದ ಮೊದಲ ವಾರದ ಕೊನೆಯ ದಿನದೊಳಗೆ ತನ್ನ ವರದಿಯನ್ನು ಸದನಕ್ಕೆ ಸಲ್ಲಿಸಬೇಕಾಗಿದೆ.

*********

ಭೂತಾನ್‌ನ ಅಭಿವೃದ್ಧಿ ಗುರಿಗಳು ಮತ್ತು ಆದ್ಯತೆಗಳಿಗೆ ಭಾರತದ ಬೆಂಬಲವನ್ನು ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಪುನರುಚ್ಚರಿಸಿದ್ದಾರೆ. ಭೂತಾನ್ ಭೇಟಿಯ ವೇಳೆ ಅಲ್ಲಿನ ವಿದೇಶಾಂಗ ಸಚಿವ ಲಿಯೊನ್‌ಪೊ ಡಿ.ಎನ್. ಧುಂಗ್ಯೆಲ್ ಅವರೊಂದಿಗೆ ದ್ವಿಪಕ್ಷೀಯ ಸಹಕಾರ, ಪ್ರಾದೇಶಿಕ ಹಾಗೂ ಅಂತಾರಾಷ್ಟ್ರೀಯ ವಿಚಾರಗಳ ಕುರಿತು ಚರ್ಚಿಸಿದರು. ಉಭಯ ಸಚಿವರು ಹಲವು ಅಭಿವೃದ್ಧಿ ಯೋಜನೆಗಳನ್ನು ಜಂಟಿಯಾಗಿ ಉದ್ಘಾಟಿಸಿದ್ದು, ಭಾರತ, ಭೂತಾನ್‌ಗೆ ೫೪ ವಿದ್ಯುತ್ ವಾಹನಗಳನ್ನು ಹಸ್ತಾಂತರಿಸಿದೆ. ಇಂಧನ ಯೋಜನೆಗಳಿಗೆ ೪ ಸಾವಿರ ಕೋಟಿ ರೂಪಾಯಿಗಳ ರಿಯಾಯಿತಿ ಸಾಲ ಒಪ್ಪಂದವನ್ನು ಸ್ವಾಗತಿಸಲಾಗಿದೆ. ಭೂತಾನ್ ನಾಗರಿಕರು ಭಾರತದಲ್ಲಿ ತಮ್ಮ ಮೊಬೈಲ್ ಅಪ್ಲಿಕೇಷನ್‌ಗಳ ಮೂಲಕ ಡಿಜಿಟಲ್ ಪಾವತಿ ಮಾಡಲು ಅನುಕೂಲವಾಗುವ ಯುಪಿಐ ಆಧಾರಿತ ವ್ಯವಸ್ಥೆಯೂ ಕಾರ್ಯಾರಂಭಿಸಿದೆ.

*********

ವಿಶ್ವಸಂಸ್ಥೆಯಲ್ಲಿನ ಭಾರತದ ಖಾಯಂ ಪ್ರತಿನಿಧಿ ಪರ್ವತನೇನಿ ಹರೀಶ್, ಅಫ್ಘಾನಿಸ್ತಾನದ ಪರಿಸ್ಥಿತಿ ಕುರಿತ ವಿಶ್ವಸಂಸ್ಥೆ ಭದ್ರತಾ ಮಂಡಳಿ ಸಭೆಯಲ್ಲಿ ಹೇಳಿಕೆ ನೀಡಿದ್ದಾರೆ ಎಂದು ಪಾಕಿಸ್ತಾನಿ ಸಾಮಾಜಿಕ ಮಾಧ್ಯಮ ಖಾತೆಗಳು ಹರಿಬಿಟ್ಟಿರುವ ವಿಡಿಯೊ, ನಕಲಿ ಎಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ. ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಸಂಸ್ಥೆ ೨೦೨೩ರ ಅಕ್ಟೋಬರ್‌ನಿಂದ ಇಸ್ರೇಲ್‌ಗೆ ಭಾರತ ಕಳುಹಿಸಿರುವ ೨ ಸಾವಿರದ ೫೯೬ ಸರಕು ಸಾಗಣೆಗಳನ್ನು ವಿಶ್ಲೇಷಿಸಿದೆ ಎಂದು ಹರೀಶ್ ಹೇಳಿದ್ದಾರೆ ಎಂಬುದು ವಿಡಿಯೊದಲ್ಲಿನ ಸುಳ್ಳು ಆರೋಪವಾಗಿದೆ. ಕೇಂದ್ರ ವಾರ್ತಾ ಶಾಖೆಯ ಸತ್ಯಶೋಧನಾ ಘಟಕ ಈ ವಿಡಿಯೊವನ್ನು ನಕಲಿ ಹಾಗೂ ಕೃತಕ ಬುದ್ಧಿಮತ್ತೆಯಿಂದ ಸೃಷ್ಟಿಸಲಾಗಿದೆ ಎಂದು ತಿಳಿಸಿದೆ. ರಾಯಭಾರಿ ಪರ್ವತನೇನಿ ಹರೀಶ್ ಅವರು ಇಂತಹ ಯಾವುದೇ ಹೇಳಿಕೆ ನೀಡಿಲ್ಲ ಎಂದು ಪಿಐಬಿ ಸ್ಪಷ್ಟಪಡಿಸಿದೆ.

*********

ಪ್ರಧಾನಮಂತ್ರಿ ನರೇಂದ್ರ ಮೋದಿ, ಸಾರ್ವಜನಿಕ ಸೇವೆಯಲ್ಲಿ ೨೫ ವರ್ಷ ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ ದೇಶಾದ್ಯಂತ ಸೇವಾ ಸಂಕಲ್ಪ ಅಭಿಯಾನ ನಡೆಯುತ್ತಿದೆ. ಜನಸೇವೆಯೇ ದೇಶಸೇವೆ ಎಂಬ ಮಂತ್ರದಡಿ ಸೇವೆ ಮತ್ತು ಸುಶಾಸನದ ದೂರದೃಷ್ಟಿಯೊಂದಿಗೆ ಸರ್ಕಾರ ೨೦೪೭ರ ವೇಳೆಗೆ ವಿಕಸಿತ ಭಾರತ ಗುರಿ ಸಾಧನೆಯತ್ತ ಸಾಗುತ್ತಿದೆ. ಎಲ್ಲರನ್ನೊಳಗೊಂಡ ಅಭಿವೃದ್ಧಿ ಮತ್ತು ಸಾಮಾಜಿಕ ಸಬಲೀಕರಣದ ಮೂಲಕ ದೇಶದ ಜನರ ಜೀವನದಲ್ಲಿ ಮಹತ್ವದ ಪರಿವರ್ತನೆಯನ್ನು ತರಲಾಗುತ್ತಿದೆ. ಅದರ ಭಾಗವಾಗಿ ಹಲವು ವಲಯಗಳಲ್ಲಿ ಕೈಗೊಂಡ ಮಹತ್ವದ ಸುಧಾರಣೆಗಳ ಕುರಿತ ಸರಣಿಯನ್ನು ಆಕಾಶವಾಣಿ ಪ್ರಸಾರ ಮಾಡುತ್ತಿದೆ. ಇಂದು ವಿಷಯ ಇಂಡಿಯಾ ಸೆಮಿಕಂಡಕ್ಟರ್ ಮಿಷನ್-೨೦೨೧ರ ಕುರಿತು ವರದಿ. ೨೦೨೧ ರ ಜಾಗತಿಕ ಚಿಪ್ ಕೊರತೆಯು, ವಾಹನ ಹಾಗೂ ವಿದ್ಯುನ್ಮಾನ ಉತ್ಪಾದನಾ ರಂಗಗಳ ಮೇಲೆ ಭಾರಿ ಪ್ರಭಾವ ಬೀರಿದ ಹಿನ್ನೆಲೆಯಲ್ಲಿ, ಭಾರತ, ವಿದೇಶಿ ಪೂರೈಕೆ ಸರಪಳಿಯ ಮೇಲಿನ ತನ್ನ ಅವಲಂಬನೆಯನ್ನು ತಗ್ಗಿಸಲು ೭೬ ಸಾವಿರ ಕೋಟಿ ರೂಪಾಯಿಗಳ ವೆಚ್ಚದ 'ಸೆಮಿಕಾನ್ ಇಂಡಿಯಾ' ಯೋಜನೆಗೆ ಡಿಸೆಂಬರ್ ೨೧, ೨೦೨೧ ರಂದು ಚಾಲನೆ ನೀಡಿತು. ಈ ಬೃಹತ್ ಯೋಜನೆಯ ಉಸ್ತುವಾರಿ ಹಾಗೂ ಅನುಷ್ಠಾನಕ್ಕಾಗಿ 'ಇಂಡಿಯಾ ಸೆಮಿಕಂಡಕ್ಟರ್ ಮಿಷನ್' ಅನ್ನು ಸೃಜಿಸಲಾಯಿತು. ಈ ಯೋಜನೆಯಡಿಯಲ್ಲಿ ಇಲ್ಲಿಯವರೆಗೆ ಸುಮಾರು ೧.೬ ಲಕ್ಷ ಕೋಟಿ ರೂಪಾಯಿ ಮೌಲ್ಯದ ೧೦ ಪ್ರಮುಖ ಯೋಜನೆಗಳಿಗೆ ಅನುಮೋದನೆ ನೀಡಲಾಗಿದ್ದು, ಇವುಗಳಲ್ಲಿ ಎರಡು ಚಿಪ್ ತಯಾರಿಕಾ ಘಟಕಗಳು ಹಾಗೂ ಎಂಟು ಪ್ಯಾಕೇಜಿಂಗ್ ಘಟಕಗಳು ಸೇರಿವೆ. ಈ ಪೈಕಿ ನಾಲ್ಕು ಘಟಕಗಳಲ್ಲಿ ಈಗಾಗಲೇ ಪ್ರಾಯೋಗಿಕ ಉತ್ಪಾದನೆ ಪ್ರಾರಂಭವಾಗಿದೆ. ಕೈಗಾರಿಕಾ ಸಾಮರ್ಥ್ಯವು ಒಂದೇ ಪ್ರದೇಶಕ್ಕೆ ಸೀಮಿತವಾಗದಂತೆ ಗುಜರಾತ್, ಅಸ್ಸಾಂ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಈ ಘಟಕಗಳನ್ನು ವಿಸ್ತರಿಸಲಾಗುತ್ತಿದ್ದು, ಭಾರತ ತನ್ನ ಸವಾಲನ್ನು ಭವಿಷ್ಯದ ಕೈಗಾರಿಕಾ ಯೋಜನೆಯನ್ನಾಗಿ ಪರಿವರ್ತಿಸಿದೆ.

*********

ಭಾರತ ಮತ್ತು ನೇಪಾಳ ಉಭಯ ದೇಶಗಳ ಉತ್ಪನ್ನಗಳಿಗೆ ಹೆಚ್ಚಿನ ಮಾರುಕಟ್ಟೆ ಪ್ರವೇಶ ಕಲ್ಪಿಸುವ ಕುರಿತು ಚರ್ಚೆ ನಡೆಸಿವೆ. ವ್ಯಾಪಾರ, ಸಾಗಣೆ ಹಾಗೂ ಅನಧಿಕೃತ ವ್ಯಾಪಾರ ನಿಯಂತ್ರಣ ಕುರಿತ ಅಂತರ್‌ಸರ್ಕಾರಿ ಉಪಸಮಿತಿಯ ಎರಡು ದಿನಗಳ ಸಭೆ ನಿನ್ನೆ ಸಂಪನ್ನಗೊಂಡಿದ್ದು, ಮಾರುಕಟ್ಟೆ ಪ್ರವೇಶ, ಕಸ್ಟಮ್ಸ್, ವ್ಯಾಪಾರ ಸುಗಮಗೊಳಿಸುವಿಕೆ, ಗುಣಮಟ್ಟ ಮಾನದಂಡಗಳು, ಆಹಾರ ಸುರಕ್ಷತೆ ಹಾಗೂ ಗಡಿ ಮೂಲಸೌಕರ್ಯ ಸೇರಿದಂತೆ ಹಲವು ವಿಷಯಗಳ ಕುರಿತು ಪರಿಶೀಲನೆ ನಡೆಸಲಾಯಿತು. ರೈಲು ಮತ್ತು ರಸ್ತೆ ಸಂಪರ್ಕ, ಸರಕು ಸಾಗಣೆ, ಸಮಗ್ರ ತಪಾಸಣಾ ಕೇಂದ್ರಗಳು ಹಾಗೂ ಭೂ ಬಂದರುಗಳ ಮೂಲಸೌಕರ್ಯ ಕುರಿತೂ ಸಭೆಯಲ್ಲಿ ಚರ್ಚೆ ನಡೆಯಿತು. ಈಗಿರುವ ಮೂಲಸೌಕರ್ಯಗಳ ಸಮರ್ಪಕ ಬಳಕೆ ಮತ್ತು ದ್ವಿಪಕ್ಷೀಯ ಹಾಗೂ ಸಾಗಣೆ ವ್ಯಾಪಾರಕ್ಕೆ ಎದುರಾಗಿರುವ ಕಾರ್ಯಾಚರಣಾ ಅಡಚಣೆಗಳನ್ನು ನಿವಾರಿಸುವ ಬಗ್ಗೆ ಗಮನಹರಿಸಲಾಯಿತು. ನಿಯಮಾನುಸಾರ ನಡೆಯುವ ವ್ಯಾಪಾರಕ್ಕೆ ಉತ್ತೇಜನ ನೀಡುವುದರ ಜೊತೆಗೆ, ಆದ್ಯತೆಯ ವ್ಯಾಪಾರ ವ್ಯವಸ್ಥೆಗಳ ದುರ್ಬಳಕೆ ತಡೆಯಲು ಮತ್ತು ನಿಯಮಗಳ ಪಾಲನೆ ಖಚಿತಪಡಿಸಿಕೊಳ್ಳಲು ಕ್ರಮಗಳನ್ನು ಬಲಪಡಿಸುವ ಕುರಿತು ಉಭಯ ದೇಶಗಳು ಒಪ್ಪಿಗೆ ವ್ಯಕ್ತಪಡಿಸಿವೆ. ಈ ಚರ್ಚೆಗಳು ಭಾರತ-ನೇಪಾಳ ನಡುವಿನ ವ್ಯಾಪಾರ, ಸಾಗಣೆ ಸಂಪರ್ಕ ಹಾಗೂ ಆರ್ಥಿಕ ಸಹಕಾರವನ್ನು ಮತ್ತಷ್ಟು ಬಲಪಡಿಸುವ ನಿರೀಕ್ಷೆಯಿದೆ.

*********

ಕೃತಕ ಬುದ್ಧಿಮತ್ತೆಯ ಪ್ರಯೋಜನಗಳು ದೊಡ್ಡ ತಂತ್ರಜ್ಞಾನ ಸಂಸ್ಥೆಗಳಿಗೆ ಮಾತ್ರ ಸೀಮಿತವಾಗದೆ, ಭಾರತದ ರೈತರು, ಸಣ್ಣ ಉದ್ಯಮಗಳು ಮತ್ತು ಗ್ರಾಮೀಣ ಸಮುದಾಯಗಳಿಗೂ ತಲುಪಬೇಕು ಎಂದು ಮೈಕ್ರೋಸಾಫ್ಟ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸತ್ಯ ನಾದೆಲ್ಲಾ ಹೇಳಿದ್ದಾರೆ. ಸಿಯಾಟಲ್‌ನಲ್ಲಿ ನಡೆದ 'ಐಡಿಯಾಸ್ ಫಾರ್ ಇಂಡಿಯಾ' ವೇದಿಕೆಯಲ್ಲಿ ಭಾರತೀಯ ಮೂಲದ ೪೦ಕ್ಕೂ ಹೆಚ್ಚು ತಂತ್ರಜ್ಞಾನ ನಾಯಕರನ್ನುದ್ದೇಶಿಸಿ ಮಾತನಾಡಿದ ಅವರು, ಕೃತಕ ಬುದ್ಧಿಮತ್ತೆಯ ವ್ಯಾಪಕ ಸಾರ್ವಜನಿಕ ಬಳಕೆ, ದತ್ತಾಂಶ ಸಾರ್ವಭೌಮತ್ವ ಮತ್ತು ಮಾನವ ಮೇಲ್ವಿಚಾರಣೆಗೆ ಆದ್ಯತೆ ನೀಡುವಂತೆ ಕರೆ ನೀಡಿದರು. ಗ್ರಾಮೀಣ ರೈತರು ತಮ್ಮ ಸ್ಥಳೀಯ ಭಾಷೆಗಳಲ್ಲಿ ಸರ್ಕಾರಿ ಸಬ್ಸಿಡಿಗಳ ಮಾಹಿತಿ ಪಡೆಯಲು ನೆರವಾಗುವ ಕೃತಕ ಬುದ್ಧಿಮತ್ತೆ ಆಧಾರಿತ ಸಾಧನದ ಉದಾಹರಣೆಯನ್ನು ಅವರು ನೀಡಿದರು. ಅಮೆರಿಕದಲ್ಲಿನ ಭಾರತದ ರಾಯಭಾರಿ ವಿನಯ್ ಕ್ವಾತ್ರಾ ಅವರು, ಕೃತಕ ಬುದ್ಧಿಮತ್ತೆಯ ಯಶಸ್ಸನ್ನು ಅದು ಸಮಾಜಕ್ಕೆ ನೀಡುವ ಪ್ರಯೋಜನದ ಆಧಾರದ ಮೇಲೆ ಅಳೆಯಬೇಕು ಎಂದು ಹೇಳಿದರು.

*********

ಜಪಾನ್‌ನಲ್ಲಿ ನಡೆಯುತ್ತಿರುವ ಏಷ್ಯನ್ ಗೇಮ್ಸ್ ಕ್ರೀಡಾಕೂಟದಲ್ಲಿ ಭಾರತ ಉತ್ತಮ ಆರಂಭ ಕಂಡಿದ್ದು, ಇಂದು ನಡೆದ ಮಹಿಳಾ ಕ್ರಿಕೆಟ್ ಕ್ವಾರ್ಟರ್ ಫೈನಲ್‌ನಲ್ಲಿ ಭಾರತ, ಜಪಾನ್ ತಂಡವನ್ನು ೮ ವಿಕೆಟ್‌ಗಳಿಂದ ಮಣಿಸಿದೆ. ಭಾರತ ತಂಡ, ಜಪಾನ್ ನೀಡಿದ್ದ ೫೮ ರನ್‌ಗಳ ಗುರಿಯನ್ನು ೨ ವಿಕೆಟ್‌ಗಳ ನಷ್ಟಕ್ಕೆ ೫ ಓವರ್‌ಗಳಲ್ಲಿ ಕ್ರಮಿಸಿ, ಗೆಲುವು ತನ್ನದಾಗಿಸಿಕೊಂಡಿದೆ. ಮತ್ತೊಂದೆಡೆ ಭಾರತದ ಟೆಕ್‌ಬಾಲ್ ಆಟಗಾರ್ತಿ ಕ್ವಿಮ್ಸಿ ಜೋಕ್ವಿಮ್ ಡಿಸೋಜಾ ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಸತತ ಎರಡು ಗೆಲುವು ದಾಖಲಿಸಿ ಸೆಮಿಫೈನಲ್ ಪ್ರವೇಶಿಸಿದ್ದಾರೆ.

******END******